ದನಿ ಇರಬೇಕು ಅನ್ನುತ್ತೆ, ಇನ್ಯಾವುದೊ ರೂಪ ಇರಬೇಕು ಅನ್ನುತ್ತೆ. ಇದೆಲ್ಲ ಯಾವುದೊ ಒಂದು ಆಂತರಿಕ ಸತ್ಯದ ಆವಿರ್ಭಾವ.

◆ ನಿಮ್ಮ ತಂದೆಯವರ ಸ್ವಭಾವ, ತಾಯಿಯ ಕಾವ್ಯ ಪ್ರೀತಿ, ಮದುವೆ ಮತ್ತದರ ವೈಫಲ್ಯ, ಪ್ರೇಮ, ಸಂಕಟ, ಕೋರ್ಟು ಕಚೇರಿ, ಹಿಮಾಲಯ, ಸಾಧು ಸಂತರ ಹುಡುಕಾಟ ಮತ್ತೆ ಅಲೆದಾಟ ಇವೆಲ್ಲ ನಿಮ್ಮ ಬದುಕಿನ ಭಾಗವಾಗಿಬಿಟ್ಟವೆ. ಛಿದ್ರವಾದ ಬದುಕಿನ ಈ ಎಲ್ಲಾ ಬಣ್ಣಗಳನ್ನು ಹೇಗೆ ಸ್ವೀಕರಿಸಿದಿರಿ? ಒಬ್ಬ ಮನುಷ್ಯನಾಗಿ, ಕವಿಯಾಗಿ? ಯಾಕೆಂದ್ರೆ ನಿಮ್ಮ ಕವಿತೆಗಳು ಮೇಲ್ನೋಟಕ್ಕೆ ಸರಾಗವಾಗಿ ಚಲಿಸ್ತಾ ಇರುವಂತೆ ಕಂಡರೂ ಅದರ ಆಳದಲ್ಲಿ ಸಮುದ್ರದೊಳಗಿನ ಹೊಯ್ದಾಟದಂತೆ ಇರುತ್ತೆ. ಬದುಕಿನ ವಿಚಿತ್ರ ತಲ್ಲಣಗಳನ್ನು ಹೊತ್ತು ತಿರುಗುತ್ತಿರುವಂತೆ ಇವೆ. ಪ್ರಶ್ನೆ ತೀರಾ ಖಾಸಗಿ ಅನ್ನಿಸಿದರೆ ಉತ್ತರ ಬೇಡ.

ನನ್ನ ಬದುಕಿನಲ್ಲಿ ಖಾಸಗಿ, ಸಾರ್ವಜನಿಕ ಅನ್ನೋ ಕಂಪಾರ್ಟ್‌ಮೆಂಟುಗಳೇನಿಲ್ಲ. ಬದುಕಿನ ಚಮತ್ಕಾರ, ಕಾವ್ಯದ ಚಮತ್ಕಾರವನ್ನು ನಾನು ಒಟ್ಟಿಗೆ ಅನುಭವಿಸಿರುವೆ. ಕಾವ್ಯ ನನಗೇ ಅಚ್ಚರಿ ಉಂಟುಮಾಡದೇ ಇದ್ರೆ ಅದು ಬೇರೆಯವರಿಗೆ ಹೇಗೆ ತಾನೆ ಅಚ್ಚರಿ ಉಂಟುಮಾಡೀತು. ನನ್ನ ಬದುಕಿನಲ್ಲಿ ಅನೇಕ ಸುನಾಮಿಗಳಾದ್ವು. ಪೂರ್ಣ ಛಿದ್ರವಾದ ಬದುಕಿನ ತಟಗಳನ್ನು ನಾನು ಮತ್ತೆ ಕಟ್ಟಿಕೊಂಡಿರುವೆ. ಬದುಕಿನ ಯಾವುದೋ ಒಂದು ಕೇಂದ್ರದಲ್ಲಿ ಈ ಸುನಾಮಿ ಶಾಂತವಾಗಿ ಹೊಸ ಬದುಕಿನ ಕಲ್ಪನೆ ಮೊಳೆಯುತಿತ್ತು. ಪ್ರತಿಕ್ಷಣ ಕೂಡ ಪ್ರಳಯವೆ. ಅದನ್ನು ನಾವು ಹೇಗೆ ಸ್ವೀಕರಿಸ್ತೇವೆ ಅನ್ನೋದರ ಮೇಲೆ ನಮ್ಮ ಬದುಕಿನ ಚಲನೆ ನಿಂತಿರ್ತದೆ. ಅದನ್ನು ಗಂಡಾಂತರವಾಗಿ, ಅಪಾಯವಾಗಿ ಕಂಡಾಗ ಜೀವನ ಮುಳುಗೋಯ್ತು ಅನ್ನುತ್ತೆ. ಆದರೆ, ತನ್ನೊಳಗಿನ ಐ ಆಫ್ ಸ್ಟಾರ್ಮ್ ಮುಖ್ಯ. ಆ ಒಂದು ಸೆಂಟರ್ ಇದೆಯಲ್ಲ ಅದನ್ನ ನಾವು ಕಂಡ್ಕೊಳ್ಳಬೇಕು. ನಾನು ಅದನ್ನು ನನ್ನ ಯೋಗ ಸಾಧನೆಯಿಂದ ಕಾಪಾಡಿಕೊಂಡೆ. ನಾವೊಂದು ಸೆಂಟರ್ ಕಂಡ್ಕೊಂಡಾಗ ಅದರ ಅಪಾಯದ ಪ್ರಮಾಣ ತಗ್ಗುತ್ತೆ. ಅಶಾಂತಕ್ಕೆ ನನ್ನ ಪ್ರತಿಭೆಯ ಮೂಲಕ ಇನ್ನೊಂದು ರೂಪ ಕೊಡುವ ಕೆಲಸವನ್ನು ನಾನು ಮಾಡಿದೆ. ಕೆಲವು ಸೇರುಬಿಂದುಗಳಿರ್ತವೆ ಅವು ಪರಸ್ಪರ ಕೂಡಿಕೊಳ್ತವೆ. ಹಾಗೆ ಕೂಡಿಕೊಂಡಾಗ ಎದುರಿಸುವ ವಿಚಿತ್ರ ಧೈರ್ಯವೂ ಬಂದ್ಬಿಡುತ್ತೆ.

◆ ಬೇಂದ್ರೆಯವರ ಕಾವ್ಯದಲ್ಲಿ ದುಃಖದ್ದೇ ಒಂದು ದೊಡ್ಡ ಲೋಕವಿದೆ. ಗಂಗಾಧರ ಚಿತ್ತಾಲರ ಕಾವ್ಯದಲ್ಲಿ ಸಾವಿನ ಲೋಕ ಇರುವಂತೆ. ಹಾಗೆಯೇ ನಿಮ್ಮ ಕಾವ್ಯದಲ್ಲಿ ಒಂದು ಒಡೆದುಹೋದ ಲೋಕದ ಚಿತ್ರಗಳಿವೆ. ಒಂದು ಒಡೆದು ಹೋದ ಕನ್ನಡಿಯ ಹಾಗೇ. ಆದರೆ, ಆ ಎಲ್ಲ ತುಣುಕುಗಳನ್ನು ಜೋಡಿಸುವ ಮೂಲಕ ನೀವೊಂದು ಹೊಸ ಕನ್ನಡಿಯನ್ನು ನಿರ್ಮಿಸ್ತಿರ್ತೀರಿ. ಅದು ಒಂದು ಚಿತ್ರವನ್ನಲ್ಲ ನೂರಾರು ಚಿತ್ರಗಳನ್ನ ಹೊಳಪಿಸ್ತಾ ಇರ್ತದೆ. ಅದು ಇಡಿಯಾಗಿಯೂ ಸತ್ಯ, ಬಿಡಿಯಾಗಿಯೂ ಸತ್ಯ.

ನಾನು ಇದನ್ನೆಲ್ಲ ಪ್ರಜ್ಞಾಪೂರ್ವಕವಾಗಿ ಮಾಡಿದ್ದಲ್ಲ. ನಾನು ಮೊದಲೇ ಹೇಳಿದೆನಲ್ಲ. ಬೇಂದ್ರೆಯವರಲ್ಲಿ ಆ ತರಹದ ಸಮಗ್ರತೆ ಇದೆಯೇ? ಅನ್ನುವುದರ ಬಗ್ಗೆ ನನಗೆ ಅನುಮಾನವಿದೆ. ಅನುಭವದ ವೈವಿಧ್ಯತೆ ಮತ್ತು ವೈರುಧ್ಯತೆಗಳನ್ನು ಏಕತಾನತೆಯಾಗದ ಏಕಸೂತ್ರದಲ್ಲಿ ಹಿಡಿಯುವ ಕೆಲಸ ಮಾಡಿದೆ. ಪರಿವರ್ತನೆಗೆ ಮನಸ್ಸು ತಾನಾಗೇ ಒಪ್ಪಿಸಿಕೊಳ್ಳಬೇಕು. ಒಂದು ಆಂತರಿಕ ಒತ್ತಡ ನಿರ್ಮಾಣಗೊಳ್ಳಬೇಕು. ನನ್ನ ಜೀವನದ ಅನೇಕ ಒತ್ತಡಗಳನ್ನು ನಾನು ಜಗತ್ತಿನ ವಿವಿಧ ಅನುಭವಗಳಲ್ಲಿ ಕಂಡುಕೊಂಡಿರುವೆ. ಕಾಶ್ಮೀರದ ಶೈವ ದರ್ಶನಗಳು, ಸೂಫಿಗಳ ಲೋಕ ಹೀಗೆ ಬಿಂಬ